## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ಶೃಂಗೇರಿ

**ಸಿ.ಸಿ.ನಂಃ 1/ 2022**

**ಫಿರ್ಯಾದುದಾರರುಃ** : ಸರ್ಕಾರದ ಪರವಾಗಿ ಶೃಂಗೇರಿ ಪೋಲೀಸರು,
ಶೃಂಗೇರಿ.

-: **ವಿರುದ್ಧ** :-

**ಆರೋಪಿಃ** : ಶಿವಶಂಕರ ಬಿ,
ಬಿನ್ ಲೇಟ್. ಬಂಗಾರಸ್ವಾಮಿ,
ವಯಸ್ಸು ಸುಮಾರು 51 ವರ್ಷ,
ವಾಸಃ ಕಾಂಚಿನಗರ, ಹೊನ್ನವಳ್ಳಿ ಅಂಚೆ,
ಶೃಂಗೇರಿ ತಾಲ್ಲೂಕು.

*****

### ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ

**ಪ್ರಶ್ನೆ-1** : ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

**ಉತ್ತರ** : ಕೇಳಿದ್ದೇನೆ.

**ಪ್ರಶ್ನೆ-2** : ಅಭಿಯೋಜನೆಯು ಪರವಾಗಿ **ಚಾಸಾ-1** ರವರಾದ ಶ್ರೀಮತಿ ಅಂಬುಜ ಆರ್. ಪ್ರಸ್ತುತ ಪತ್ರಾಂಕಿತ ಆಪ್ತ ಸಹಾಯಕರು, ಬೆಂಗಳೂರು ಇವರನ್ನು **ಫ್ರಾಸಾ-1** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ09/10/2020 ರಂದು ಚಿಕ್ಕಮಗಳೂರು ಜಿಲ್ಲಾಧಿಕಾರಿಯವರ ಕಚೇರಿಯಿಂದ ಸರ್ವೇ ನಂಬರ್ 215 ರಲ್ಲಿ ಮಣ್ಣನ್ನು ಅಗೆದಿದ್ದಾರೆ ಎಂದು ಮತ್ತು ಸದರಿಯವರ ವಿರುದ್ಧ ಕ್ರಮ ಕೈಗೊಳ್ಳಲು ಅವರಿಗೆ ಪತ್ರ ಬಂದಿರುತ್ತದೆ ಎಂದು, ಈ ಸಂಬಂಧ ಅವರು ದಿಃ02/12/2020 ರಂದು ರಾತ್ರಿ 9 ಗಂಟೆಗೆ ನಿಪಿ-1 ರಂತೆ ದೂರನ್ನು ಟೈಪ್ ಮಾಡಿ ಅವರ ಕಚೇರಿಯ ಸಿಬ್ಬಂದಿಯಾದ ಸುರೇಶ್ ರವರಿಗೆ ಕೊಟ್ಟು ಠಾಣೆಗೆ ಕಳುಹಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ–3** : **ಪ್ರಾಸಾ–1** ರವರು ಮುಂದುವರೆದು, ಈ ಸಂಬಂಧ ಪೋಲಿಸರು ದಿಃ 3/12/2020 ರಂದು ಬೆಳಿಗ್ಗೆ 10 ರಿಂದ 11 ಗಂಟೆ ವರೆಗೆ ಅವರು ತೋರಿಸಿರುವ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ನಿಪಿ–2 ರಂತೆ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ ಎಂದು ಸದರಿ ಸಮಯದಲ್ಲಿ ನಿಪಿ–3 ರಂತೆ ಪೋಟೋ ತೆಗೆದಿರುತ್ತಾರೆ ಎಂದು, ದಿಃ 04/12/2020 ರಂದು 2018 ರಿಂದ 2020 ರವರೆಗೆ ತಹಶೀಲ್ದಾರ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಸಿರುವ ಅಧಿಕಾರಿಗಳ ವಿವರಗಳನ್ನು ಕೇಳಿ ನಿಪಿ–4 ರಂತೆ ಮನವಿ ಸಲ್ಲಿಸಿದ್ದು, ಈ ಸಂಬಂಧ ಅವರು ದಿಃ11/01/2021 ರಂದು ಸದರಿ ವಿವರಣೆಗಳನ್ನು ನಿಪಿ–6 ರಂತೆ ವರದಿ ಸಮೇತ ನೀಡಿರುತ್ತಾರೆಂದು ನುಡಿದಿರುತ್ತಾರೆ. ದಿಃ 25/06/2021 ರಂದು ಅವರಿಗೆ ಠಾಣೆಯಿಂದ ಸದರಿ ಸರ್ವೇ ನಂಬರ್ 215 ಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಕೋರಿ ಮನವಿ ಬಂದಿದ್ದು, ಈ ಸಂಬಂಧ ದಿಃ 17/07/2021 ರಂದು ಸರ್ವೇ ನಂಬರ್ 215 ಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ–4** : ಅಭಿಯೋಜನೆಯ ಪರವಾಗಿ **ಚಾಸಾ–4** ರವರಾದ ಶ್ರೀಮತಿ ಎಂ. ಭಾಗ್ಯಮ್ಮ, ಪ್ರಸ್ತುತ ಮುನಿಸಿಪಾಲ್ ತಹಸೀಲ್ದಾರರು, ತುಮಕೂರು ಇವರನ್ನು **ಪ್ರಾಸಾ–3** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ 1, 5 ರಿಂದ 7 ನನಗೆ ಗೊತ್ತು. ಸುಮಾರು 5 ವರ್ಷಗಳ ಹಿಂದೆ ಶೃಂಗೇರಿ ಜೆ.ಎಂ.ಎಫ್.ಸಿ., ನ್ಯಾಯಾಲಯದಿಂದ ಶೃಂಗೇರಿ ತಾಲ್ಲೂಕು ಸರ್ವೇ ನಂಬರ್ 215 ರ 2 ಗುಂಟೆಯಲ್ಲಿ ಸ್ಥಳ ಪರಿಶೀಲನೆ ಮಾಡಿ ನಕಾಶನೆ ತಯಾರಿಸಿ ನೀಡುವಂತೆ ಪತ್ರ ಬಂದಿರುವುದಾಗಿ, ಈ ಸಂಬಂಧ ಅವರು, ಚಾಸಾ 5 ಮತ್ತು 6 ರವರು ಹಾಗೂ ಬೇರೆ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಚಾಸಾ 5 ರವರು ಅವರ ಸಮಕ್ಷಮ ನಿಪಿ–8 ರಂತೆ ನಕಾಶೆ ತಯಾರಿಸಿ ತಾಲ್ಲೂಕು ಕಚೇರಿಗೆ ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಸಂಬಂಧ ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ–5** : ಅಭಿಯೋಜನೆಯ ಪರವಾಗಿ **ಚಾಸಾ–5** ರವರಾದ ಶ್ರೀ ಸೋಮಯ್ಯ, ಭೂ ಮಾಪಕರು, ಶೃಂಗೇರಿ ಇವರನ್ನು **ಪ್ರಾಸಾ–4** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ 1, 4, 6 ಮತ್ತು 7 ರವರು

ಗೊತ್ತು. ದಿಃ 21/12/2018 ರಂದು ಚಾಸಾ 4 ರವರು ಶೃಂಗೇರಿ ತಾಲ್ಲೂಕು ಸರ್ವೇ ನಂಬರ್ 215 ರಲ್ಲಿ 2 ಗುಂಟೆಗೆ ಸಂಬಂಧಿಸಿ ನಕಾಶೆ ತಯಾರು ಮಾಡಲು ಅವರಿಗೆ ಆದೇಶ ನೀಡಿದ್ದು ಈ ಸಂಬಂಧ ಅದೇ ದಿನ ಸ್ಥಳಕ್ಕೆ ಹೋಗಿ, ಸ್ಥಳ ಪರಿಶೀಲನೆ ಮಾಡಿ ಕಚ್ಚಾ ನಕಾಶೆ ತಯಾರಿಸಿ ಕಚೇರಿಗೆ ಬಂದು ಪಕ್ಕಾ ನಕಾಶೆ ತಯಾರು ಮಾಡಿ ನೀಡಿರುತ್ತಾರೆಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಚಾಸಾ 4, 6, 7 ರವರು ಹಾಜರಿದ್ದರು ಎಂದು, ಈ ಸಂಬಂಧ ಪೋಲಿಸರಿಗೆ ಹೇಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-6** : ಅಭಿಯೋಜನೆಯ ಪರವಾಗಿ **ಚಾಸಾ-6** ರವರಾದ ಶ್ರೀ ಶಾಮಪ್ಪ ಬಾಳಪ್ಪ ಪಾತ್ರೋಟ್, ಪ್ರಸ್ತುತ ಗ್ರಾಮ ಲೆಕ್ಕಾಧಿಕಾರಿ, ಬೆಳಗಾವಿ ಇವರನ್ನು **ಫ್ರಾಸಾ-5** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ 1, 4, 6 ಮತ್ತು 7 ಗೊತ್ತು. ದಿಃ 21/12/2018 ರಂದು ಚಾಸಾ 4 ರವರ ಸೂಚನೆ ಮೇರೆಗೆ ಸರ್ವೇ ನಂಬರ್ 234/1 ರಿಂದ 4 ಹಾಗೂ ಸರ್ವೇ ನಂಬರ್ 215 ಜಮೀನಿಗಳಿಗೆ ಭೇಟಿ ನೀಡಿದ್ದು, ಸ್ಥಳದಲ್ಲಿ ಚಾಸಾ 4, 7, 5 ಹಾಗೂ ಇನ್ನು ಬೇರೆ ಕಚೇರಿಯ ಅಧಿಕಾರಿಗಳು ಹಾಜರಿದ್ದರು ಎಂದು, ಚಾಸಾ 5 ರವರು ಸ್ಥಳ ಅಳತೆ ಮಾಡಿ ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದು ಅವರು ಪಕ್ಕಾ ನಕಾಶೆಗೆ ಕಚೇರಿಯಲ್ಲಿ ಸಹಿ ಮಾಡಿರುತ್ತಾರೆಂದು, ಈ ಸಂಬಂಧ ಪೋಲಿಸರಿಗೆ ಹೇಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-7** : ಅಭಿಯೋಜನೆಯ ಪರವಾಗಿ **ಚಾಸಾ-7** ರವರಾದ ಶ್ರೀ ಪ್ರವೀಣ್ ಕುಮಾರ್, ಉಪ ತಹಸೀಲ್ದಾರರು, ಶೃಂಗೇರಿ ಇವರನ್ನು **ಫ್ರಾಸಾ-6** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ 1, 4 ರಿಂದ 6 ಗೊತ್ತು. ದಿಃ 20/12/2018 ರಂದು ನ್ಯಾಯಾಧೀಶರು ಶೃಂಗೇರಿ ಸರ್ವೇ ನಂಬರ್ 234/1 ರಿಂದ 4 ಹಾಗೂ ಸರ್ವೇ ನಂಬರ್ 215 ಗೆ ಬಂದು ಅವರನ್ನು ಕರೆಸಿದ್ದು, ಸ್ಥಳಕ್ಕೆ ಹಾಜರಾಗಿ ಸದರಿ ಸರ್ವೇ ನಂಬರ್ 215 ರಲ್ಲಿ ನೆಲ ಸಮತಟ್ಟು ಮಾಡಿದ್ದು, ಸದರಿ ಜಮೀನಿನಲ್ಲಿ ಬೇಲಿ ಇರುವುದರಿಂದ ಯಾವ ಜಾಗ ಎಂದು ತಿಳಿದುಕೊಳ್ಳಲು ಮಾನ್ಯ ನ್ಯಾಯಾಧೀಶರು ತಹಶೀಲ್ದಾರರವರಿಗೆ ಸದರಿ ಸ್ಥಳವನ್ನು ಅಳತೆ ಮಾಡಿ ಸರ್ಕಾರಿ ಜಾಗವೋ

ಅಥವಾ ಖಾಸಗಿ ಜಾಗವೋ ಎಂದು ಮಾಹಿತಿ ನೀಡಲು ಮೌಖಿಕವಾಗಿ ಸೂಚನೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-8** : **ಫ್ರಾಸಾ-6** ರವರು ಮುಂದುವರೆದು, ನಂತರ ತಹಶೀಲ್ದಾರವರಿಗೆ ನ್ಯಾಯಾಲಯದಿಂದ ಜಮೀನು ಸರ್ವೆ ನಂಬರ್ 215 ರಲ್ಲಿರುವ ಜಮೀನು ಸಮತಟ್ಟು ಮಾಡಿದ್ದರಿಂದ ಹಾನಿ ಉಂಟಾಗಬಹುದೇ ಎಂದು ಮಾಹಿತಿ ಕೇಳಿ ಪತ್ರ ಬಂದಿದ್ದು, ಈ ಸಂಬಂಧ ತಹಶೀಲ್ದಾರ್ ಕಚೇರಿಯಿಂದ ಅವರಿಗೆ ಹಾಗೂ ಚಾಸಾ 5 ರವರಿಗೆ ವರದಿ ನೀಡಲು ಸೂಚಿಸಿರುತ್ತಾರೆಂದು ನುಡಿದಿರುತ್ತಾರೆ. ಸದರಿ ಸ್ಥಳದಲ್ಲಿ ಬೇಲಿ ಇರುವುದರಿಂದ ಬೇಲಿಯಲ್ಲಿರುವ ಸಂಪೂರ್ಣ ಸ್ಥಳ ಅಳತೆ ಮಾಡಿದಾಗ ಸರ್ವೆ ನಂಬರ್ 234/1 ರಿಂದ 4 ಮಾಲೀಕರು ಸರ್ವೆ ನಂಬರ್ 215 ನ್ನು ನೆಲಸಮ ಮಾಡಿರುವುದಾಗಿ ಕಂಡು ಬಂದಿದ್ದು, ಈ ಬಗ್ಗೆ ವರದಿ ನೀಡಿರುವುದಾಗಿ ನುಡಿದಿರುತ್ತಾರೆ. ಈ ಸಂಬಂಧ ಪೋಲಿಸರಿಗೆ ಹೇಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-9** : ಅಭಿಯೋಜನೆಯ ಪರವಾಗಿ **ಚಾಸಾ-10** ರವರಾದ ಶ್ರೀ ಮೂರ್ತಪ್ಪ, ಎ.ಎಸ್.ಐ. ಶೃಂಗೇರಿ ಇವರನ್ನು **ಫ್ರಾಸಾ-7** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ21/04/2021 ರಂದು ಚಾಸಾ 9 ರವರಿಂದ ಮೇಲಾಧಿಕಾರಿಗಳ ಆದೇಶದಂತೆ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿರುತ್ತಾರೆಂದು, ದಿಃ23/04/2021 ರಂದು ಚಾಸಾ 1 ರವರಿಗೆ ಘಟನಾ ಸ್ಥಳದ ಸರ್ವೆ ನಂಬರ್ 215 ರ ದಾಖಲೆಗಳನ್ನು ಕೋರಿ ನಿಪಿ-10 ರಂತೆ ಮನವಿ ಸಲ್ಲಿಸಿರುತ್ತಾರೆಂದು, ದಿಃ18/05/2021 ರಂದು ಚಾಸಾ 1 ರವರು ಘಟನಾ ಸ್ಥಳಕ್ಕೆ ಸಂಬಂಧಿಸಿ ದಾಖಲೆಗಳನ್ನು ನೀಡಿದ್ದು, ಅದನ್ನು ಸ್ವೀಕರಿಸಿರುವುದಾಗಿ, ದಿಃ 25/06/2021 ರಂದು ಘಟನಾ ಸ್ಥಳದ ಸರ್ವೆ ನಂಬರ್ 215 ರಲ್ಲಿ 0.02 ಗುಂಟೆಗೆ ಸಂಬಂಧಿಸಿ ಪಹಣಿ ನೀಡುವಂತೆ ಚಾಸಾ 1 ರವರಿಗೆ ನಿಪಿ-6 ರಂತೆ ಮನವಿ ಪತ್ರ ಸಲ್ಲಿಸಿರುವುದಾಗಿ, ದಿಃ 17/11/2021 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ಅವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಿ ಕಲಂ 41 ಎ ಸಿ ಆರ್ ಪಿ ಸಿ ಅಡಿಯಲ್ಲಿ ನೋಟಿಸ್ ನೀಡಿರುತ್ತಾರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-10** : **ಫ್ರಾಸಾ-7** ರವರು ಮುಂದುವರೆದು, ದಿಃ 01/12/2021 ರಂದು ಶೃಂಗೇರಿ ಘನ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ: 01/2019 ರ ಆದೇಶ ಪುಟಗಳನ್ನು ನೀಡಲು ನ್ಯಾಯಾಲಯಕ್ಕೆ ನಿಪಿ-12 ರಂತೆ ಮನವಿ ಪತ್ರ ಸಲ್ಲಿಸಿರುತ್ತಾರೆಂದು, ದಿಃ 16/12/2021 ರಂದು ನ್ಯಾಯಾಲಯದಿಂದ ದಾವಾ ಸಂಖ್ಯೇ 1/2019 ರ ಆದೇಶ ಪುಟಗಳನ್ನು ಸ್ವೀಕರಿಸಿರುವುದಾಗಿ, ದಿಃ06/12/2021 ರಂದು ಈ ಪ್ರಕರಣದ ಸಾಕ್ಷಿದಾರರಾದ ಚಾಸಾ 4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆಂದು, ಸದರಿ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದ ಭಾವಚಿತ್ರ ತೆಗೆದು ಸಿಡಿಗೆ ಕಾಪಿ ಮಾಡಿರುವ ಸಂಬಂಧ ಚಾಸಾ 8 ರವರಿಂದ ದೃಢೀಕರಣವನ್ನು ಪಡೆದುಕೊಂಡಿರುತ್ತಾರೆಂದು, ನಂತರ ಸದರಿ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದು ಕಲಂ 192 ಎ, 192 ಬಿ ಕರ್ನಾಟಕ ಲ್ಯಾಂಡ್ ರೆವೈನ್ಯೂ ಅಮೆಂಡ್ಮೆಂಟ್ ಆಕ್ಟ್ ಮತ್ತು ಕಲಂ 3, 4 ಕರ್ನಾಟಕ ಲ್ಯಾಂಡ್ ಗ್ರಾಬಿಂಗ್ ಪ್ರೋಹಿಬಿಶನ್ ಆಕ್ಟ್ ಮತ್ತು 434 ಐಪಿಸಿ ಸಾಭೀತು ಆಗದೇ ಇರುವುದರಿಂದ ಸದರಿ ಕಲಂಗಳನ್ನು ಕೈ ಬಿಡಲಾಗಿರುತ್ತದೆ. ಎಂದು, ಮುಂದುವರೆದು ಆರೋಪಿಯು ಸರ್ವೇ ನಂಬರ್ 215 ರಲ್ಲಿ 0.02 ಗುಂಟೆ ಸ್ಥಳವನ್ನು ಸಮತಟ್ಟು ಮಾಡಿ ಒತ್ತುವರಿ ಮಾಡಿರುತ್ತಾನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-11** : ಅಭಿಯೋಜನೆಯ ಪರವಾಗಿ **ಚಾಸಾ-9** ರವರಾದ ಶ್ರೀ ಕೀರ್ತಿ ಕುಮಾರ್, ಪ್ರಸುತ ಪಿ.ಎಸ್.ಐ. ಅಲ್ದೂರು ಪೊಲೀಸ್ ಠಾಣೆ, ಅಲ್ದೂರು, ಇವರನ್ನು **ಫ್ರಾಸಾ-8** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ02.12.2020 ರಂದು ಚಾಸಾ-1 ಅವರ ಕಚೇರಿಯ ಸಿಬ್ಬಂದಿಯಾದ ಹೆಚ್ ಜಿ ಸುರೇಶ್ ರವರ ಮೂಲಕ ದೂರನ್ನು ದಾಖಲಿಸಿದ್ದು, ದೂರಿನ ಆಧಾರದ ಮೇಲೆ ಆರೋಪಿಯ ವಿರುದ್ಧ ಠಾಣಾ ಗುನ್ನೆ ನಂಃ 63/2020 ರಂತೆ ಕಲಂ 447,434 ಭಾ.ದಂ.ಸಂ ಹಾಗೂ ಕಲಂ 3 ಮತ್ತು 4 ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011 ಹಾಗೂ ಕಲಂ192 (ಎ) ಮತ್ತು (ಬಿ) ಕರ್ನಾಟಕ ಭೂ ಕಂದಾಯ ಅಧಿನಿಯಮ ರೀತ್ಯಾ ಪ್ರಕರಣ ದಾಖಲಿಸಿ ನಿಪಿ-16 ರಂತೆ ಪ್ರ.ವ. ವರದಿಯನ್ನು ದಾಖಲು ಮಾಡಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ, ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-12** : ಪ್ರಾಸಾ-**8** ರವರು ಮುಂದುವರೆದು, ಅದೇ ದಿನ ಕೃತ್ಯ ಸ್ಥಳವಾದ ಶೃಂಗೇರಿ ಗ್ರಾಮಾಂತರ ವ್ಯಾಪ್ತಿಗೆ ಬರುವ ಸರ್ಕಾರಿ ಸರ್ವೆ ನಂಃ 215 ರಲ್ಲಿ ಶಾರದನಗರದ ಶ್ರೀ ಚೌಡೇಶ್ವರಿ ದೇವಸ್ಥಾನದ ಪಕ್ಕದಲ್ಲಿರುವ 2 ಗುಂಟೆ ಜಾಗ ಆಗಿದ್ದು, ಸದರಿ ಸ್ಥಳದಲ್ಲಿ ಪಂಚರಾಗಿ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿರುವ ಸ್ಥಳದಲ್ಲಿ ಮಹಜರ್ ಕ್ರಮವನ್ನು ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಜರುಗಿಸಿ ಮಹಜರ್ ಮಾಡಿ ನಕಾಶೆ ತಯಾರಿಸಿ, ಫೋಟೋ ತೆಗೆದಿರುವುದಾಗಿ ನುಡಿದಿರುತ್ತಾರೆ. ದಿನಾಂಕಃ 24.12.2020 ರಂದು ಚಾಸಾ-1 ರವರಿಗೆ ದಿನಾಂಕಃ 01.01.2018 ರಿಂದ ಶೃಂಗೇರಿ ತಾಲ್ಲೂಕು, ಕಸಬಾ ಹೋಬಳಿ ಯಲ್ಲಿ ಕಾರ್ಯನಿರ್ವಹಿಸಿರುವ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು, ಸರ್ವೇಯರ್ ರವರುಗಳ ಹೆಸರು ಮತ್ತು ವಿಳಾಸ ಹಾಗೂ ಇತರೆ ಮಾಹಿತಿ ಬಗ್ಗೆ ಕೋರಿ ಮನವಿ ಸಲ್ಲಿಸಿರುತ್ತಾರೆಂದು, ನಂತರ ಚಾಸಾ-10 ರವರಿಗೆ ಮುಂದಿನ ತನಿಖೆಗಾಗಿ ಕಡತವನ್ನು ವಹಿಸಿಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-13** : ಅಭಿಯೋಜನೆಯ ಪರವಾಗಿ **ಚಾಸಾ-15** ರವರಾದ ಶ್ರೀ ಭರಮಪ್ಪ ಬೆಳಗಲಿ, ಪಿ.ಎಸ್.ಐ. ಶೃಂಗೇರಿ ಪೊಲೀಸ್ ಠಾಣೆ, ಶೃಂಗೇರಿ, ಇವರನ್ನು **ಪ್ರಾಸಾ-9** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 16/07/2022 ರಂದು ಮೇಲಾಧಿಕಾರಿಗಳ ಆದೇಶದಂತೆ ಪ್ರಕರಣದ ಮುಂದುವರೆದ ತನಿಖೆಯನ್ನು ಕೈಗೊಂಡಿರುವುದಾಗಿ ದಿನಾಂಕಃ15.08.2022 ರಂದು ಕೃತ್ಯದಲ್ಲಿ ಬಳಸಲಾಗಿದೆ ಎನ್ನಲಾದ ಜೆ ಸಿ ಬಿಗಳ ಪತ್ತೆಗಾಗಿ ಠಾಣೆಯ ಸಿಬ್ಬಂದಿಗಳಾದ ಪ್ರವೀಣ್ ಮತ್ತು ಗಿರೀಶ್ ಎನ್ನುವವರನ್ನು ನೇಮಕ ಮಾಡಿದ್ದು, ದಿನಾಂಕಃ 15.08.2022 ಹಾಗೂ 16.08.2022 ರಂದು ಅವರಿಂದ ವರದಿ ಪಡೆದಿರುತ್ತಾರೆಂದು, ನಂತರ ದಿನಾಂಕಃ 17.08.2022 ರಂದು ಪ್ರಸ್ತುತ ಶೃಂಗೇರಿ ತಹಶೀಲ್ದಾರ್ ರವರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೋರಿ ಮನವಿ ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ–14** : **ಫ್ರಾಸಾ–9** ರವರು ಮುಂದುವರೆದ, ತನಿಖೆಯನ್ನು ಮುಂದುವರೆಸಿ ದಿನಾಂಕಃ 18.09.2022 ರಂದು ಶೃಂಗೇರಿ ಪ್ರಸ್ತುತ ತಹಶೀಲ್ದಾರ್ ರವರು ನೀಡಿದ ದಾಖಲೆಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ದಿನಾಂಕಃ 16.10.2022 ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ಅದೇ ದಿನ ಸಾಕ್ಷಿದಾರರಾದ ಚಾಸಾ–11 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡು, ದಿನಾಂಕಃ 20.10.2022 ರಂದು ಆರೋಪಿಗೆ 91 ಸಿ ಆರ್ ಪಿ ಸಿ ಮೂಲಕ ದಾಖಲೆಯನ್ನು ಕೋರಿ ತಿಳುವಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ. ದಿನಾಂಕಃ 22.10.2022 ರಂದು ಆರೋಪಿ ನೀಡಿದ ದಾಖಲೆಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ, ದಿನಾಂಕಃ 26.10.2022 ರಂದು ಹೆಚ್ಚುವರಿ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ–15** : ನಿಮಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ?

**ಉತ್ತರ** : ಇಲ್ಲ

**ಪ್ರಶ್ನೆ–16** : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

**ಉತ್ತರ** : ಇಲ್ಲ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ಧೃಡೀಕರಿಸುತ್ತೇನೆ )

**ದಿನಾಂಕಃ 15.03.2025.**

ಸಹಿ/–15.03.2025.

**(ಶ್ರೀ. ದಾಸರಿ ಕ್ರಾಂತಿ ಕಿರಣ್)**

**ಸಿ.ಜೆ. ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಶೃಂಗೇರಿ.**

**ಆರೋಪಿಯ ಸಹಿಃ**